ಅದಕ್ಕೆ ತಲೆಯಾಡಿಸುತ್ತ ಮೇಡಂ ಸಬಿನಾಗೆ, 'ಇನ್ನು ನೀನು ಹೋಗಿ ಮಹಿಳೆಯರ ಕೊಠಡಿಯಲ್ಲಿ ಕೂತಿರು, ಕರೆದಾಗ ಬಾ' ಎನ್ನುತ್ತ ಮೇಡಂ ಸಿದ್ದುವಿಗೆ, 'ಏ ಸಿದ್ದು, ಹೊರಗ ವಿಶ್ರಾಂತಿ ಕೊಠಡಿಯಾಗ ಹಮೀದ್ ಅನ್ನೋರು ಕೂತಾರೆ, ಕರಿ ಸ್ವಲ್ಪ' ಅಂದರು. ಸಬೀನಾ ಆಚೆ ಎದ್ದು ಹೋದ ಐದು ನಿಮಿಷಗಳ ನಂತರ ಮೀಟಿಂಗಿನ ಕೊಠಡಿಗೆ ಹಮೀದ್ ಪ್ರವೇಶಿಸಿದ. ಕೂತುಕೊಳ್ಳಿ ಎಂಬಂತೆ ಸನ್ನೆ ಮಾಡಿದ ಮೇಡಂ, 'ನೀವೇ ಅಲ್ರೀ, ಆಗ ಹೇಳ್ದೇ ಕೇಳ್ದೇ ನುಗ್ಗಿದವರು?' ಅಂತ ಕೇಳಿದ್ದೇ ಹಮೀದ್ ಪ್ಯಾಂಟಿನ ಕಿಸೆಯಿಂದ ಕರವಸ್ತ್ರ ತೆಗೆದು ಹಣೆ ವರೆಸಿಕೊಳ್ಳುತ್ತ, 'ಮೇಡಂ ಸಾರಿ, ಮೇಡಂ ಸಾರಿ' ಅನ್ನುತ್ತ ಕುರ್ಚಿಯಲ್ಲಿ ಕೂಡದೇ ನಿಂತ ಶೈಲಿಯಲ್ಲಿ ಯಾಕೋ ಅನಗತ್ಯ ವಿನಯ ತೋರ್ಪಡಿಸುತ್ತಿದ್ದಾನೆನ್ನಿಸಿತು ನನಗೆ.

'ಹಮೀದ್, ಏನ್ರೀ, ಸಬೀನಾ ಅನ್ನೋ ಹೆಣ್ಣುಮಗಳಿಗೆ ಮೋಸ ಮಾಡಿದ್ದೀರಂತೆ' ಅಂತ ಮೇಡಂ ಬಾಯ್ಬಿಡುವುದರೊಳಗೆ, 'ಇಲ್ಲರೀ ಮೇಡಂ, ಎಲ್ಲಾ ಸುಳಸುಳ್ಳ ಹೇಳ್ಕೋತ ಅಡ್ಡಾಡತಾಳರೀ, ಆಕೀ ಕಂಪ್ಲೆಂಟ್‌ನಾಗ ಒಂದೂ ವಿಷಯ ಖರೇವಿಲ್ಲರೀ. ಪಾಪ ಬಡವಳು ಅಂತ ಫ್ಯಾಕ್ಟರೀ ಕೆಲಸಕ ತೊಗೊಂಡ್ರ ನಮ್ಮ ವಿರೋಧಿಗಳ ಜೊತಿ ಸೇರಿ ನಮ್ಮ ಫ್ಯಾಕ್ಟರಿ ಕಾನ್ಫಿಡೆನ್ಸಿಯಲ್ ವಿಷಯ ಅವರೀಗ್ ಮುಟ್ಸಿ, ಅಲ್ಲೀನೂ ರೊಕ್ಕ ಹೊಡದಾಳರೀ. ಅಕೀದ್ ಒಂದ ಎರಡ ಅಲ್ಲರೀ ಮೇಡಂ, ಒಂದ್ ಬುರ್ಖಾ ತೊಟ್ಕೊಳಂಗಿಲ್ಲ ಏನಿಲ್ಲ ನೀವ ನೋಡೀರಲ್ಲ ಈಗ? ಬರೆ ಮೂರೂ ಹೊತ್ತು ಬ್ಯಾರೆ ಬ್ಯಾರೆ ರಿಕ್ಷಾದವರ ಜೊತೀ ಅಡ್ಡಾಡತಾಳರೀ. ಎಲ್ಲಿ ಹೊಕ್ಕಾಳ ಎಲ್ಲಿ ಬರ್ತಾಳ ಒಂದೂ ಗೊತ್ತಗವಲ್ದರಿ, ಅಕೀ ಮಾತ ನಂಬಬ್ಯಾಡ್ರೀ ನೀವ ಮೇಡಂ. ರಿಕ್ಷಾ ಡ್ರೈವರ್‌ಗಳ ದೋಸ್ತೀ ಐತ್ರಿ ಅಕೀಗೆ' ಅಂದದ್ದೇ, 'ನೋಡ್ರಿ ಇವರೇ, ರಿಕ್ಷಾದವರ ದೋಸ್ತಿ ಐತ್ರಿ ಅಂತ ರೇಜಿಗೆ ಅನ್ನೊವಂಗ ಹೇಳೋದ್ನ ಮೊದ್ಲ ಬಿಡ್ರಿ. ಅವ್ರೂ ಭಾಳ ಶ್ರಮಪಟ್ಟೇ ದುಡದ ಬದಕತಾರ. ಎಲ್ಲ ರಿಕ್ಷಾದವರನ್ನೂ ಒಂದ ಮಾಡಬೇಡ್ರೀ' ಡೇಸಿ ಇದ್ದಲ್ಲೇ ರಾಂಗ್ ಆದರು. ಅದರ ಹಿಂದೆಯೇ ನಾನೂ, 'ಹೌದಪ್ಪ ನಿಮ್ಮ ತಲೀಯೊಳಗಿನ ಇಂಥ ಕ್ಷುಲ್ಲಕ ಯೋಚನಿ ಮೊದ್ಲ ಬಿಡ್ರಿ' ಅಂದಿದ್ದೆ. 'ಹೌದ ಅಕೀಗ ಮದ್ವಿ ಮಾಡ್ಕೋತೆನಿ ಅಂತ ಮೋಸ ಮಾಡೀರಂತ ನೀವು? ಅಬಾರ್ಷನ್ ಬ್ಯಾರೆ ಮಾಡ್ಸಿರಿ ಅಂತಾಳ. ನಿಮ್ಮ ತಮ್ಮ ಸಲೀಮ್ ಮತ್ತ ಕಾರ್ ಡ್ರೈವರ್ ಆಕೀನ್ನ ಹಿಡ್ಕೊಂಡು ಹೊಡದಾರಂತ? ನಿಮ್ಮ ತಮ್ಮ ಕಂಪ್ಲೆಂಟ್ ಕೊಟ್ಟು ಬೆದರಿಸಿ ಸುಳ್ಳ ಪತ್ರ ಬರಸಿಕೊಂಡಾನಂತ? ಮೊಬೈಲ್ ಕಸ್ದು ಅದರೊಳಗಿದ್ದ ನಿಮ್ಮ ಮಾತು ಮೆಸೆಜ್ ಎಲ್ಲ ಡಿಲೀಟ್ ಮಾಡ್ಯಾನಂತ?' 'ಅಯ್ಯೋ ಅಯ್ಯೋ ಖುದಾ, ಎಲ್ಲಾ ಸುಳ್ಳರೀ ಮೇಡಂ. ಅಕೀ ಹೇಳೂದಕ್ಕ ಒಂದರೆ ಸಾಕ್ಷಿ ಐತೆನ್ರೀ? ದುಡ್ಡು ಹೊಡಿಯಾಕ ಮಾಡೋ ಪ್ಲ್ಯಾನ್‌ರೀ ಅವೆಲ್ಲ. ಕೈ ನರ ಕತ್ತರಸ್ಕೊಂಡು ಫ್ಯಾಕ್ಟರೀ ಗೇಟಿನಾಗ ಬಿದ್ದಿದ್ಲು. ನಾವ ದವಾಖಾನಿಯೊಳಗ ಟ್ರೀಟ್ಮೆಂಟ್ ಕೊಡ್ಸಿ ಮನೀಗ ಮುಟ್ಸಿ ಬಂದೇವಿ. ಆವ್ಯಾಗ ನಾವ ಕಂಪ್ಲೆಂಟು ಕೊಟ್ವಿ ಯಾಕಂದ್ರ ಸುಸೈಡ್ ಮಾಡ್ಕೊಂಡ್ರ ನಮ್ಮ ತಲೀ ಮ್ಯಾಗ ಬರ್ತಾರದಲ್ರೀ ಮತ್ತ? ಎಲ್ಲಾ ಸಾಕ್ಷಿ ಈ ಫೈಲಿನಾಗ ಐತ ನೋಡ್ರಿ ಮೇಡಂ' ಅಂದ ಹಮೀದ್.

'ಹೌದ? ನಿಮ್ದಿನ್ನೂ ಮದ್ವಿ ಆಗಿಲ್ಲಂತ, ಅದಕ ನಾವು ಇಬ್ಬರಿಗೂ ರಾಜಿ ಮಾಡ್ಸಿ ಇಲ್ಲೇ ಒಂದು ನಿಖಾ ಮಾಡ್ಸೋನೇನು ಅಂತ ಮಾತಾಡಿಕೊಂಡ್ವಿ' ಅಂತ ಮೇಡಂ ಹೇಳುತ್ತಿದ್ದಂತೆಯೆ ಹಮೀದ್ ಹಾರಿಬಿದ್ದು, 'ಅರೆ ಅರೆ ಇದೊಂದು ಭಾಳ ದೊಡ್ಡ ಸುಳ್ಳರೀ ಮೇಡಂ. ನನಗ ಇನ್ನೂ ಮದ್ವಿ ಆಗಿಲ್ಲ ಅಂದ್ಲರೀ? ಇದಕಿಂತ ದೊಡ್ಡ ಸುಳ್ಳ ಬೇಕ್ರೀ? ಮನೀಯೊಳಗ ಹೆಂಡತಿ ಮಕ್ಕಳು ಅದಾವರೀ ನನಗ. ಈ ವರ್ಷ ಮಗಳ ದೊಡ್ಡಾಕಿ ಆಗ್ಯಾಳ್ರೀ. ತಡಿರಿ ಮೊಬೈಲ್ನಾಗ ಅವರ ಫೋಟೊ ತೋರ್ಸೇ ಬಿಡ್ತೆನಿ' ಅನ್ನುತ್ತ ಮೊಬೈಲ್ ಓಪನ್ ಮಾಡಿ ಹೆಂಡತಿ ಹಾಗೂ ತನ್ನ ಮೂವರು ಮಕ್ಕಳ ಜೊತೆಯಿರುವ ಫೋಟೊ ತೋರಿಸಿದ. ನಾವು ಮೂವರೂ ಕನ್ನಡಕ ತೊಟ್ಟು ಅವನ ಮೊಬೈಲ್ ಹಿಡಿದು ದಿಟ್ಟಿಸಿ ಹಿಂತಿರುಗಿಸಿದೆವು. ಆತನೇ ಮುಂದುವರೆದು, 'ರಾತ್ರೀ ಅನ್ನೂದಿಲ್ಲ, ಹಗಲನ್ನೂದಿಲ್ಲ, ಪದೇ ಪದೇ